**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇಂಡಿ.**

**ಸಿ.ಸಿ.ನಂ.2633/2019**

**ಡಿ.ಡಬ್ಲ್ಯೂ-1**

| | |
|---|---|
| ಸಾಕ್ಷಿಯ ಹೆಸರು | :ಸಿದ್ದಪ್ಪ ಪಾಟೀಲ |
| ತಂದೆ/ಗಂಡನ ಹೆಸರು | : ಲಕ್ಷ್ಮಣ |
| ವಯಸ್ಸು | : 40 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸಸ್ಥಳ | : ಮಹಾಲಿಂಗಪುರ |

**ದಿನಾಂಕ:09-04-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ. ಆರ್.ಆರ್.ಕೆ. ವಕೀಲರಿಂದಃ**

ಪಿರ್ಯಾದಿದಾರರು ನನ್ನ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುವುದಿಲ್ಲ. ನಾನು ಪಿರ್ಯಾದಿದಾರರಿಗೆ 9,85,000/- ರೂ.ಗಳನ್ನು ಮತ್ತು ಯಾವುದೇ ಸಾಲಗಳನ್ನು ಕೊಡಲು ಭ್ಯಾದ್ಯಸ್ಥನು ಇರುವುದಿಲ್ಲ. ಪಿರ್ಯಾದಿದಾರರನ್ನು ನಾನು ಮೊದಲಿಗೆ ನ್ಯಾಯಾಲಯದಲ್ಲಿ ನೋಡಿರುತ್ತೇನೆ. ಅದಕ್ಕಿಂತ ಮುಂಚೆ ನಾನು ಪಿರ್ಯಾದಿಯನ್ನು ಎಲ್ಲಿಯೂ ನೋಡಿರುವುದಿಲ್ಲ. 2013 ರಲ್ಲಿ ನನಗೆ ಹಣದ ಅವಶ್ಯಕತೆ ಇದ್ದಾಗ ಪಿರ್ಯಾದಿದಾರರ ಬೀಗರಾದ ಬಸವರಾಜ ಜಲಪುರ ಇವರನ್ನು ಭೇಟಿಯಾಗಿರುತ್ತೇನೆ. ಸದರಿಯವರನ್ನು ಭೇಟಿಯಾಗಿ 1,50,000/- ರೂ.ಗಳನ್ನು ಕೇಳಿರುತ್ತೇನೆ. ಬಸವರಾಜ ಜಲಪುರ ಇವರು ನನಗೆ 1,50,000/- ರೂ.ಗಳನ್ನು ಕೊಡುವುದಕ್ಕಿಂತ ಮೊದಲು ನನ್ನ ಬಳಿ 2 ಚೆಕ್ಕಗಳನ್ನು ಕೇಳಿರುತ್ತಾರೆ. ಆ ಪ್ರಕಾರ ನಾನು ಅವರಿಗೆ 2 ಸಹಿ ಮಾಡಿದ ಚೆಕ್ಕಗಳನ್ನು ನೀಡಿರುತ್ತೇನೆ. ಬಸವರಾಜ ಜಲಪುರ ಇವರು ನನ್ನಿಂದ ಹೆಚ್ಚು ಹಣ ಪಡೆದುಕೊಳ್ಳಬೇಕೆನ್ನುವ ದುರುದ್ದೇಶದಿಂದ ಪಿರ್ಯಾದಿದಾರರ ಕಡೆಯಿಂದ ಈ ಪ್ರಕರಣವನ್ನು ಮತ್ತು ಇನ್ನೊಂದು ಪ್ರಕರಣ ಸಂಖ್ಯೆ 1415/2019 ನ್ನು ದಾಖಲು ಮಾಡಿಸಿರುತ್ತಾರೆ. ಬಾಪುರಾಯ ಬಿರಾದಾರ ಮತ್ತು ಪಿರ್ಯಾದಿದಾರರನ್ನು ನಾನು ಎಲ್ಲಿಯೂ ನೋಡಿಲ್ಲ. ಈ ಕಾರಣದಿಂದ ನಾನು ಪಿರ್ಯಾದಿದಾರರಿಂದ 9,85,000/- ರೂ.ಗಳನ್ನು ಸಾಲವಾಗಿ ಪಡೆದುಕೊಳ್ಳುವ ಅವಶ್ಯಕತೆ ಉಂಟಾಗಿಲ್ಲ.

-2-

2018 ನೇ ಇಸವಿಯಲ್ಲಿ ನನಗೆ ಹಣದ ಅವಶ್ಯಕತೆ ಇರಲಿಲ್ಲ. ಪಿರ್ಯಾದಿದಾರನು ನಾನು ಆತನ ಹತ್ತಿರ ವ್ಯವಸಾಯ ಮತ್ತು ಕುಟುಂಬದ ಅವಶ್ಯಕತೆಗಳಿಗಾಗಿ 9,85,000/- ರೂ.ಗಳನ್ನು ಪಡೆದುಕೊಂಡಿರುತ್ತೇನೆ ಎನ್ನುವ ಆರೋಪಿ ಸಂಪೂರ್ಣ ಸುಳ್ಳು ಇರುತ್ತದೆ. ನಾನು ಚೆಕ್ಕ ನಂ.852682 ದಿಃ05.12.2018 ಕರ್ನಾಟಕ ಬ್ಯಾಂಕ್ ಶಾಖೆಯ ಚೆಕ್ಕನ್ನು ಪಿರ್ಯಾದಿದಾರನಿಗೆ ಕೊಡುವ ಅವಶ್ಯಕತೆ ಬಂದಿಲ್ಲ. ಪಿರ್ಯಾದಿಯು ಮಾಡಿರುವ ಎಲ್ಲಾ ಸಂಗತಿಗಳು ಸುಳ್ಳು ಇರುತ್ತವೆ.

ದಿಃ23.01.2019 ರಂದು ಪಿರ್ಯಾದಿದಾರರು ವಕೀಲರ ಮುಖಾಂತರ ನೋಟಿಸನ್ನು ನೀಡಿದ್ದು ಆ ನೋಟಿಸು ನನಗೆ ದಿಃ25.01.2019 ರಂದು ಜಾರಿಯಾಗಿರುತ್ತದೆ. ಆ ನಂತರ ನಾನು ಹಿರಿಯರ ಜೊತೆ ಹೋಗಿ ಬಸವರಾಜ ಜಲಪುರೆ ಇವರನ್ನು ಭೇಟಿ ಮಾಡಿರುತ್ತೇನೆ. ಸದರಿ ಬಸವರಾಜ ಜಲಪುರ ಇವರು ನೋಟಿಸಿನ ಬಗ್ಗೆ ಯಾವುದೇ ಕಾನೂನು ಕ್ರಮ ತೆಗೆದುಕೊಳ್ಳುವುದಿಲ್ಲವೆಂದು ಭರವಸೆ ನೀಡಿದ್ದರು. ಸದರಿ ಭರವಸೆಯನ್ನು ನಂಬಿ ನಾನು ನೋಟಿಸಿಗೆ ಯಾವುದೇ ಉತ್ತರ ನೀಡಲಿಲ್ಲ. ಪಿರ್ಯಾದಿದಾರರು ಬಸವರಾಜ ಜಲಪುರ ಇವರ ಕಡೆಯಿಂದ ಚೆಕ್ಕನ್ನು ತೆಗೆದುಕೊಂಡು ನನ್ನ ಮೇಲೆ ಈ ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ಪಿರ್ಯಾದಿದಾರರು ನನಗೆ ನೀಡಿದ ನೋಟಿಸು ಮತ್ತು ಅದರ ಮೇಲಿನ ಅಂಚೆ ಲಕೋಟೆಯನ್ನು ನಿಶಾನೆಗೊಳಿಸಬೇಕೆಂದು ಆರೋಪಿಯು ಕೇಳಿಕೊಂಡಿದ್ದು ಆದ ಕಾರಣ ನೋಟಿಸನ್ನು ನಿ.ಡಿ.1 ಎಂದು ಮತ್ತು ಅಂಚೆ ಲಕೋಟೆಯನ್ನು ನಿ.ಡಿ.1(ಎ) ಎಂದು ಗುರುತಿಸಲಾಯಿತು. ಪಿರ್ಯಾದಿದಾರನು ಮಾಡಿರುವ ಈ ಪ್ರಕರಣವನ್ನು ವಜಾ ಮಾಡಿ ನನ್ನನ್ನು ಈ ಕೇಸಿನಿಂದ ಬಿಡುಗಡೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲು: ಪಿರ್ಯಾದಿ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೆ.ಕೆ. ಸರಿ ಇದೆ**

ಸಹಿ/-

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.**